KATK010026892023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ ಸಂ.301/2023**

ಪ್ರಾ.ಸಾ. ಃ **1**

ದೋ.ಸಾ. ಃ **2**

ದಿ.**12.01.2026**

ಹೆಸರು ಃ ಜಿತೇಂದ್ರ ಕುಮಾರ್

ತಂದೆಯ ಹೆಸರು ಃ ಗುರುರಾಜ್

ವಯಸ್ಸು ಃ **46** ವರ್ಷ

ಉದ್ಯೋಗ ಃ ಆಟೋ ಚಾಲಕ

ವಾಸಸ್ಥಳ ಃ ಸೊರವನಹಳ್ಳಿ ಗ್ರಾಮ

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು ಮಾಯಸಂದ್ರದಲ್ಲಿ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಸ್ವಂತ ಆಟೋ ಹೊಂದಿದ್ದೇನೆ. ದಿ.10.08.2018 ರಂದು ಸಂಜೆ 4.50 ಗಂಟೆಗೆ ನಾನು ಮಾಯಸಂದ್ರ ಬಸ್ ನಿಲ್ದಾಣದ ಆಟೋ ನಿಲ್ದಾಣದಲ್ಲಿದ್ದಾಗ ಒಂದು ಹುಡುಗಿ ಬಸ್ ನಲ್ಲಿ ಬಂದು ಪ್ರಜ್ಞಾಹೀನಳಾಗಿ ಚರಂಡಿ ಮೇಲೆ ಬಿದ್ದಳು. ಆಕೆಯನ್ನು ಎತ್ತಿಕೊಂಡು ಆಟೋದಲ್ಲಿ ಹಾಕಿ ಮಾಯಸಂದ್ರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ನಾನು, ನನ್ನ ಗೆಳೆಯರಾದ ಗುರುಸ್ವಾಮಿ ಮತ್ತು ಸೋಮಶೇಖರ್ ಹೋದೆವು. ಅವಳ ಕುತ್ತಿಗೆಯಲ್ಲಿ ಕಾಲೇಜಿನ ಗುರುತಿನ ಚೀಟಿ ಇದ್ದುದರಿಂದ ಆಕೆ ಕಾಲೇಜ್ ವಿದ್ಯಾರ್ಥಿ ಎಂದು ಗೊತ್ತಾಯಿತು. ಆ ಗುರುತಿನ ಚೀಟಿಯಲ್ಲಿ ಆಕೆಯ ಹೆಸರು ಜ್ಯೋತಿಲಕ್ಷ್ಮಿ ಎಂದು ಬರೆದಿತ್ತು. ಆ ಗುರುತಿನ ಚೀಟಿಯ ಹಿಂಭಾಗದಲ್ಲಿ ಅವಳ ತಾಯಿಯ ಫೋನ್ ನಂಬರ್ ಇತ್ತು. ಈ ವಿಚಾರವನ್ನು ಆ ನಂಬರಿಗೆ ಕಾಲ್ ಮಾಡಿ ತಾಯಿಗೆ ತಿಳಿಸಿದೆವು. ನಂತರ ಮಾಯಸಂದ್ರ ಆಸ್ಪತ್ರೆಯವರು ಆಕೆಯನ್ನು ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಕೆ ವಿಷ ಕುಡಿದಿದ್ದರಿಂದ ತೀರಿಕೊಂಡಳು ಎಂದು ಗೊತ್ತಾಯಿತು. ಅದು ಲವ್ ಕೇಸ್ ಎಂದು ಊರಿನವರು

ಹೇಳಿದ್ದರಿಂದ ಗೊತ್ತಾಯಿತು.

2. ದಿ.11.08.2018 ರಂದು ತುರುವೇಕೆರೆ ಪೋಲೀಸರು ಸಂಜೆ 5.00 ಗಂಟೆಗೆ ಜ್ಯೋತಿಲಕ್ಷ್ಮಿ ಬಿದ್ದಂತಹ ಜಾಗಕ್ಕೆ ಮಹಜರ್ ಮಾಡಲು ಬಂದಿದ್ದರು. ಆ ಸ್ಥಳದಲ್ಲಿ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು, ಮಹಜರನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಶ್ರೀ.ಪವನ್ ಕುಮಾರ್ ಎಸ್, ವಕೀಲರಿಂದ ಆರೋಪಿತನ ಪರವಾಗಿ :**

(ಕೋರಿಕೆಯ ಮೇರೆಗೆ ಮುಂದೂಡಲಾಯಿತು).

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.13.01.2026 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ವಿಖ್ಯಾತ್ ಬಿ. ವಕೀಲರಿಂದ ಆರೋಪಿತನ ಪರವಾಗಿ :**

**3.** ನಾನು ಎರಡನೇ ಪಿಯುಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮಾಯಸಂದ್ರದಲ್ಲಿ ಆಟೋ ಓಡಿಸುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ದಿ.11.08.2018 ರಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಅದನ್ನು ಓದಿ ಸಹಿ ಮಾಡಿದ್ದೇನೆ. ಹೇಳಿಕೆಯಲ್ಲಿ ಏನು ಇದೆ ಎಂದು ತಿಳಿದುಕೊಂಡಿದ್ದೇನೆ. ನನಗೆ ಗುರುತಿನ ಚೀಟಿಯನ್ನು ಓದಲು ಬರುತ್ತದೆ. ಜ್ಯೋತಿಲಕ್ಷ್ಮಿಯ ಗುರುತಿನ ಚೀಟಿ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಇತ್ತು, ವಿವೇಕಾನಂದ ಕಾಲೇಜ್, ತುರುವೇಕೆರೆ ಎಂದಿತ್ತು. ಚರಂಡಿಯ ಸ್ಲಾಬ್ ಮೇಲೆ ಬಿದ್ದಿದ್ದಳು ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ. ದಿ.11.08.2018 ರಂದು ಪೋಲೀಸರ ಮುಂದೆ ಹೇಳಿಕೆ ಕೊಡುವಾಗ ಜ್ಯೋತಿಲಕ್ಷ್ಮಿ ಚರಂಡಿಯ ಸ್ಲಾಬ್ ಮೇಲೆ ಬಿದ್ದಿದ್ದಳು ಎಂದು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಾಯಸಂದ್ರ ಆಸ್ಪತ್ರೆಗೆ ಆಕೆಯನ್ನು ಕರೆದುಕೊಂಡು ಹೋಗಿದ್ದೇನೆಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

**4.** ಮಾಯಸಂದ್ರದಲ್ಲಿ ಸರ್ಕಾರಿ ಬಸ್ ಸ್ಟಾಂಡ್ ಇದೆ. ಜನಸಂಚಾರ ಇದೆ. ಅಲ್ಲಿ ಸೇರಿದ್ದ ಮಹಿಳೆಯರು ಜ್ಯೋತಿಲಕ್ಷ್ಮಿಯನ್ನು ಎತ್ತಿ ಆಟೋದಲ್ಲಿ ಹಾಕಿದರು. ಬೇರೆಯವರ ಆಟೋದಲ್ಲಿ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆನು. ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು